
॥ಶ್ರೀರಾಮಧನ್ವಂತರೀ ವಿಜಯೇತೆ॥ **॥ಶ್ರೀಃ॥** ॥ಶ್ರೀಗುರುರಾಜೋ

॥ಶ್ರೀವಾಯುಃಜೀವೋತ್ತಮಃ॥ ॥ಶ್ರೀವಾದಿರಾಜೋಽಪಿ ಜೀವೋತ್ತಮಃ॥

# ॥ ಶ್ರೀಮದಣುವೃಂದಾವನಾಖ್ಯಾನಂ ॥

॥ ಶ್ರೀಗುರುಭ್ಯೋನಮಃ ಹರಿ: ಓಂ ॥




**- ಶ್ರೀ ರಘುನಂದನ ಆಚಾರ್ಯ**

**[ಶ್ರೀಶ್ರೀವಿಶ್ವನಂದನತೀರ್ಥರು (ಪೂರ್ವಾಶ್ರಮ)]**

Tattvavada E-Library

**ನತ್ವಾ ಕೃಷ್ಣಂ ಮಧ್ವಮುನಿಂ ವಾದಿರಾಜಮುನಿಂ ತಥಾ।**

**ಅಣುವೃಂದಾವನಾಖ್ಯಾನಮ್ ವಿತನೋಮ್ಯಹಮ್॥೧॥**

### ಪೀಠಿಕಾ

ಶ್ರೀವಾದಿರಾಜತೀರ್ಥಶ್ರೀಮಚ್ಚರಣರ ಭಾವಿಸಮೀರತ್ವವನ್ನು ಸ್ಪಷ್ಟವಾಗಿ ಪ್ರತಿಪಾದಿಸತಕ್ಕ, ರಾಜರಿಂದಲೇ ಬ್ರಾಹ್ಮಣನ ಸ್ವಪ್ನದಲ್ಲಿ ಬಂದು ರಚಿತವಾದ, ಶ್ರೀವೇದನಿಧಿತೀರ್ಥರಿಂದ ಲಿಖಿತವಾದ ಸ್ವಾಪ್ನವೃಂದಾವನಾಖ್ಯಾನದಿಂದ ಕೆಲವು ಶ್ಲೋಕಗಳನ್ನು ಆರಿಸಿ ಅಣುವೃಂದಾವನಾಖ್ಯಾನವನ್ನು ಸಂಪಾದಿಸಲಾಗಿದೆ. ಆದ್ದರಿಂದ, ಸ್ವಾಪ್ನವೃಂದಾವನಾಖ್ಯಾನದಲ್ಲಿ ಪ್ರಾಮಾಣ್ಯ ಬುದ್ಧಿಯುಳ್ಳ ಸಜ್ಜನರಿಗೆ ಅಣುವೃಂದಾವನಾಖ್ಯಾನವು ಅತ್ಯಂತಮಾನ್ಯವಾಗಿದೆ. '**ಶ್ರೀಮದ್ಭಾಷ್ಯವನ್ನು**' ಪಾರಾಯಣಮಾಡಲು ಅಶಕ್ತರಾದವರು '**ಅಣುಭಾಷ್ಯವನ್ನು**' ಪಾರಾಯಣಮಾಡಿ ಶ್ರೇಯಸ್ಸನ್ನು ಪಡೆಯುವಂತೆ, '**ಸ್ವಾಪ್ನವೃಂದಾವನಾಖ್ಯಾನವನ್ನು**' ಪಠಿಸಲು ಅಶಕ್ತರಾದವರು "**ಅಣುವೃಂದಾವನಾಖ್ಯಾನವನ್ನು**' ಪಠಿಸಿ ಇಷ್ಟಾರ್ಥವನ್ನು ಸಂಪಾದಿಸಬಹುದಾಗಿದೆ. ಇಂತಹ ಅಣುವೃಂದಾವನಾಖ್ಯಾನದ ಸರಳಾಭಿಪ್ರಾಯವು ಸಜ್ಜನರಿಗೆ ದೊರಕಲೆಂಬ ಸದುದ್ದೇಶದಿಂದ ಕರ್ಣಾಟಕಭಾಷೆಯಲ್ಲಿ ವ್ಯಾಖ್ಯಾನವು ಮಾಡಲ್ಪಡುತ್ತದೆ.

**ವಾದಿರಾಜೋಕ್ತಿಚಾತುರ್ಯಂ ಅಶಕ್ಯಂ ಜ್ಞಾತುಮಂಜಸಾ ।**

**ಯನ್ಮಾದೃಶೋಽಪಿ ಯತತೇ ವ್ಯಾಖ್ಯಾತುಂ ಸಾಹಸಂ ಹಿ ತತ್ ॥೧॥**

ಶ್ರೀವಾದಿರಾಜರ ಮಾತಿನ ಚಾತುರ್ಯವು ಚೆನ್ನಾಗಿ ತಿಳಿಯಲು ಅಶಕ್ಯವು. ನನ್ನಂತಹವರೂ ವ್ಯಾಖ್ಯಾನ ಮಾಡಲು ಪ್ರಯತ್ನಿಸಿದರೆ ಅದು ಅತಿ ಸಾಹಸವೇ ಸರಿ.

**ಹಯಗ್ರೀವಂ ಚಿದಾನಂದವಿಗ್ರಹಂ ಸದನುಗ್ರಹಂ ।**

**ದಶಗ್ರೀವಚ್ಛಿದಂ ಶಾಪಾನ್ಮಣಿಗ್ರೀವವಿಮೋಚನಂ ॥ 1 ॥**

**ಸ್ವನಾಮಗ್ರಹಣಾದೇವ ನಿರಸ್ತಗ್ರಹವಿಗ್ರಹಂ ।**

**ವೃಂದಾವನಗತಂ ವಂದೇ ಬ್ರಹ್ಮರುದ್ರೇಂದ್ರವಂದಿತಂ ॥ 2 ॥**

**ಗುರುರಾಜರು ಗ್ರಂಥಾರಂಭದಲ್ಲಿ ತಮ್ಮ ಉಪಾಸ್ಯಮೂರ್ತಿಯಾದ ಶ್ರೀಹಯಗ್ರೀವ ದೇವರ ನಮಸ್ಕಾರ ರೂಪವಾದ ಮಂಗಲಾಚರಣೆಯನ್ನು ಮಾಡುತ್ತಿದ್ದಾರೆ.** ಶ್ರೀಹಯಗ್ರೀವ ದೇವರು ಜ್ಞಾನಾನಂದಾತ್ಮಕ ದೇಹವುಳ್ಳವರು; ಸಜ್ಜನರಿಗೆ

ಅನುಗ್ರಹ ಮಾಡತಕ್ಕವರು ಅಥವಾ ಶ್ರೀವಾಯುದೇವರಲ್ಲಿ ಪೂರ್ಣಾನುಗ್ರಹವುಳ್ಳವರು; ದಶಕಂಠರಾವಣನನ್ನು ಸಂಹರಿಸಿದವರು; ನಾರದರ ಶಾಪದಿಂದ ನಳ(ಲ) ಕೂಬರ ಮಣಿಗ್ರೀವರನ್ನು ಮೋಚನೆ ಮಾಡಿದವರು; ತಮ್ಮ ನಾಮಸ್ಮರಣೆಯಿಂದಲೇ ಎಲ್ಲಾ ಗ್ರಹಗಳ ಬಾಧೆಯನ್ನು ಪರಿಹರಿಸತಕ್ಕವರು; ಬ್ರಹ್ಮರುದ್ರೇಂದ್ರರಿಂದ ನಮಸ್ಕೃತರು; ವೃಂದಾವನದಲ್ಲಿ ಅಂತರ್ಗತರು. ಇಂಥಾ ಶ್ರೀಹಯಗ್ರೀವದೇವರನ್ನು ನಮಸ್ಕರಿಸುತ್ತೇನೆ.

**ಯೋ ಮಾಂ ದೇವಂ ವಿಜಾನಾತಿ ಋಜುಸ್ಥಂ ಪುಣ್ಯಕೃನ್ನರಃ ।**

**ಸ ಯಾತಿ ನಿಲಯಂ ಪುಣ್ಯಂ ಯದ್ಗತ್ವಾ ನ ನಿವರ್ತತೇ ॥3॥**

**ಈ ಶ್ಲೋಕದಲ್ಲಿ ಗುರುರಾಜರು ತಮ್ಮ ಋಜುತ್ವವನ್ನು ಪ್ರಕಟಿಸಿರುತ್ತಾರೆ;** ಯಾವ ಪುಣ್ಯಾತ್ಮನಾದ ಮನುಷ್ಯನು, ನನ್ನನ್ನು ಋಜುಗಣದಲ್ಲಿರುವ (ಲಾತವ್ಯರೆಂಬ) ದೇವತೆಯೆಂದು ತಿಳಿಯುತ್ತಾನೋ, ಆತನು ಎಲ್ಲಿಗೆ ಹೋದರೆ ಹಿಂದಿರುಗಿ ಬರಲಾರನೋ ಅಂಥಾ ಪುಣ್ಯಕರವಾದ ಸ್ಥಾನವನ್ನು ಹೊಂದುತ್ತಾನೆ.

**"ಯಾರು ನನ್ನನ್ನು ಋಜುಸ್ಥದೇವತೆ ಎಂದು ತಿಳಿಯುತ್ತಾರೋ ಅವರೇ ಪುಣ್ಯಾತ್ಮರಾದ ನರರು ಎಂದು ಹೇಳಿದ್ದರಿಂದ, ಹೀಗೆ ತಿಳಿಯದವರು ಪಶುಗಳೆಂದು ಧ್ವನಿಯು ಬರುತ್ತದೆ". ಋಜುಗಳೆಂದರೆ ಬ್ರಹ್ಮತ್ವ ಯೋಗ್ಯತೆಯುಳ್ಳ ಜೀವರು. ಮನೋವಾಕ್ಕಾಯಕರ್ಮಗಳಿಂದ ಎಂದೂ ಭಗವದ್ವಿರೋಧವನ್ನು ಮಾಡದೇ ಇರತಕ್ಕವರು.**

**ವಿಮಾನಂ ದಿವ್ಯಮಾನಂ ಚ ದೀಪ್ಯಮಾನಂ ಸದಾಯನಮ್ ।**

**ವೃಂದಾವನೋಪರಿಗತಂ ಪೂಜಯಂತು ಸದಾ ಮಮ ॥ 4 ॥**

**ತಮ್ಮ ವೃಂದಾವನದ ಮೇಲೆ ಇರುವ ವಿಮಾನವು ಸದಾ ಪೂಜ್ಯವೆಂದು ತಿಳಿಸುತ್ತಾರೆ**; ನನ್ನ ವೃಂದಾವನದ ಮೇಲೆ ದಿವ್ಯವಾದ, ಪ್ರಕಾಶಮಾನವಾದ, **'ಸತ್‌ಶಬ್ದವಾಚ್ಯರಾದ ಶ್ರೀಹರಿವಾಯುಗಳಿಗೆ'** ಆಶ್ರಯವಾದ ವಿಮಾನವಿರುವುದು. ಇದನ್ನು ಸಜ್ಜನರು ಸರ್ವದಾ ಪೂಜಿಸಲಿ.

**ಪಂಚವೃಂದಾವನೇ ಪುಣ್ಯೇ ಪಂಚರೂಪಾತ್ಮಕೋ ಹರಿಃ ।**

**ಪಂಚೀಕೃತ್ಯ ಸ್ವರೂಪಾಣಿ ನಿತ್ಯಂ ಸನ್ನಿಹಿತಃ ಸ್ವಯಂ ॥ 5 ॥**

**ತಮ್ಮ ವೃಂದಾವನದಲ್ಲಿರುವ ಶ್ರೀಹರಿಯ ಸನ್ನಿಧಾನ ವಿಶೇಷವನ್ನು ವರ್ಣಿಸುತ್ತಾರೆ;** ಗುರುರಾಜರಿಗೆ **'ಇತರ ವಿಲಕ್ಷಣವಾಗಿ ಐದು - ವೃಂದಾವನಗಳು**

**ಇರುತ್ತವೆ.**' ಈ ಪುಣ್ಯಕರವಾದ ಪಂಚವೃಂದಾವನದಲ್ಲಿ ಪಂಚರೂಪವುಳ್ಳ ಶ್ರೀಹರಿಯು ತನ್ನರೂಪಗಳನ್ನು ಐದೈದು ಮಾಡಿಸಿಕೊಂಡು ನಿರಂತರವೂ ಸನ್ನಿಹಿತನಾಗಿದ್ದಾನೆ. ಪ್ರತಿ ವೃಂದಾವನದಲ್ಲಿಯೂ ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ರೂಪಗಳಿಂದ ಸನ್ನಿಹಿತನಾಗಿದ್ದಾನೆಂದರ್ಥ, ಅಥವಾ ಒಂದು ವೃಂದಾವನದಲ್ಲಿ ನಾರಾಯಣ, ನಾರಾಯಣಾದಿ - ಪಂಚರೂಪಗಳು; ಎರಡನೆಯ ವೃಂದಾವನದಲ್ಲಿ ವಾಸುದೇವ - ನಾರಾಯಣಾದಿ ಪಂಚರೂಪಗಳು ಇತ್ಯಾದಿ ಕ್ರಮದಿಂದ ಐದು ವೃಂದಾವನದಲ್ಲಿ ಸನ್ನಿಹಿತನಾಗಿದ್ದಾನೆಂದರ್ಥ, ಅಥವಾ ಮುಂದಿನ ಶ್ಲೋಕದಲ್ಲಿ ಹೇಳುವಂತೆ, ಬ್ರಹ್ಮ, ವಾಯು, ಗುರುರಾಜರು ಮತ್ತು ರುದ್ರರಲ್ಲಿ ಅಂತರ್ಗತವಾದ ನಾಲ್ಕು ರೂಪಗಳು, ಒಂದು ಸಾಕ್ಷಾತ್ ವಿಷ್ಣುರೂಪ ಹೀಗೆ ಐದು ವೃಂದಾವನಗಳಲ್ಲಿಯೂ ಪ್ರತ್ಯೇಕವಾಗಿ ಸನ್ನಿಹಿತನಾಗಿದ್ದಾನೆಂದರ್ಥ. (*ಮಂದಮತಿಗೆ ತೋರಿದಷ್ಟು ಗುರುರಾಜರ ಪ್ರೇರಣೆಯಿಂದ ವ್ಯಾಖ್ಯಾನಿಸಿದ್ದೇನೆ. ದೊಡ್ಡವರು ವಿಮರ್ಶಿಸುವುದು.*)

**ಅಹಂ ಬ್ರಹ್ಮಾಚ ವಾಯುಶ್ಚ ವಿಷ್ಣೂ ರುದ್ರಶ್ಚ ಪಂಚಮಃ ।**

**ರಮಾಮ ನಿತ್ಯಮೇವಾತ್ರ ಶ್ವೇತದ್ವೀಪೇ ಯಥಾ ವಯಂ ॥ 6 ॥**

**ಹಿಂದಿನ ಶ್ಲೋಕದಲ್ಲಿ ಸೂಚಿಸಿದ ಪಂಚರೂಪಗಳನ್ನೇ ಇಲ್ಲಿ ಸ್ಪಷ್ಟಪಡಿಸುತ್ತಾ;** ಇಲ್ಲಿ ಮಾತ್ರವಲ್ಲದೆ ಶ್ವೇತದ್ವೀಪದಲ್ಲೂ ತಾವು ವಿಹರಿಸುತ್ತಾರೆಂದು ತಿಳಿಸುತ್ತಾರೆ. ನಾನೂ, ಬ್ರಹನೊ, ವಾಯುವೂ, ವಿಷ್ಣುವೂ, ಐದನೆಯ(ವರಾ)ದಾದ ರುದ್ರನೂ ಈ ವೃಂದಾವನದಲ್ಲಿ ನಿತ್ಯವೂ ಶ್ವೇತದ್ವೀಪದಲ್ಲಿದ್ದಂತೆ ವಿಹರಿಸುತ್ತೇವೆ.[1]

**ಅಹಂ ಸದಾ ದೇವಸಭಾಸುಭಾಜಿತಃ**

**ಸುಭಾಸ್ವರೈಃ (ಸಭಾಸ್ವರೈಃ) ದಿವ್ಯವಿಭೂಷಣೈರ್ಯುತಃ ।**

**ಅಹಂ ಸಮಾನೈಃ ಸುರಮಾನಿಮಾನಿತಃ**

**ಸುಮಾನಯುಕ್ತೈಃ ಸುಮನೋಭಿರಂಜಸಾ ॥ 7 ॥**

**ದೇವತಾ ಪೂಜ್ಯತ್ವರೂಪವಾದ ತಮ್ಮ ಮಹಿಮೆಯನ್ನು ತಿಳಿಸುತ್ತಾರೆ :** ನಾನು ಯಾವಾಗಲೂ ದೇವತಾಸಭೆಯಲ್ಲಿ ಗೌರವಿಸಲ್ಪಟ್ಟವನು, ಅತ್ಯಂತ ಪ್ರಕಾಶಮಾನವಾದ ದಿವ್ಯ ಆಭರಣಗಳಿಂದ ಅಲಂಕೃತನು. ನನಗೆ ಸಮಾನರಾದ ಬಹುಮಾನಯುಕ್ತರಾದ ಇತರ ಋಜುಗಳೊಡನೆ, ಪುಷ್ಪಗಳಿಂದ ದೇವತೆಗಳ ಮರ್ಯಾದೆಗೂ ಪಾತ್ರರಾದವರಿಂದ ಚೆನ್ನಾಗಿ ಮಾನಿತನಾಗಿದ್ದೇನೆ.

[1] ಶ್ರೀಗುರುರಾಜರು ನಿರ್ಮಿಸಿರುವ ತ್ರಿಧಾಮಗಳಲ್ಲಿ ಜಗದ್ವಿಲಕ್ಷಣ ಪ್ರಪ್ರಥಮ ಪಂಚವೃಂದಾವನ ಇರುವುದು (ಅ) ಶ್ವೇತದ್ವೀಪದಲ್ಲಿಯೇ, (ಆ) ಅನಂತಾಸನ - ಶ್ರೀಪಾದರು ಸಂಸ್ಥಾನದ ಪೂಜೆ ಮಾಡುವ ಸ್ಥಳ, (ಇ) ವೈಕುಂಠ - ಶ್ರೀಗುರುರಾಜರಿಂದ ಪ್ರತಿಷ್ಠಿತ ಶ್ರೀರಮಾತ್ರಿವಿಕ್ರಮದೇವರ ಸನ್ನಿಧಾನ, ಶ್ರೀಭೂತರಾಜರಿಂದ ತರಿಸಿದ್ದು.

**ಗುರುಮಖಿಲಗುಣಜ್ಞಂ ಸದ್ಗುಣೈಕಾಧಿವಾಸಂ**

**ಶಮದಮಪರಿನಿಷ್ಠಂ ಸತ್ವನಿಷ್ಠಂ ವರಿಷ್ಠಂ ।**

**ಸಕಲಸುಜನಶಿಷ್ಟಂ ನಿತ್ಯನಿರ್ಧೂತಕಷ್ಟಂ**

**ಹಯಮುಖಪದನಿಷ್ಠಂ ಮಾಂ ಭಜಂತು ಪ್ರಪನ್ನಾಃ ॥ 8 ॥**

**ಶರಣಾಗತರು ಭಜಿಸುವ ಕ್ರಮವನ್ನು ತಿಳಿಸುತ್ತಾರೆ;** ನಾನು ಸಮಸ್ತ ಗುಣಪೂರ್ಣನಾದ ಭಗವಂತನನ್ನು ತಿಳಿದಿದ್ದೇನೆ: ಭಕ್ತಿಜ್ಞಾನಾದಿಗುಣಗಳಿಗೆ ಮಾತ್ರ ವಾಸಸ್ಥಾನನಾಗಿದ್ದೇನೆ (**ದೋಷಗಳಿಗೆ ಅಲ್ಲ!**); ಭಗವನ್ನಿಷ್ಠತೆ; ಇಂದ್ರಿಯನಿಗ್ರಹಗಳಲ್ಲಿ ಅತ್ಯಂತ ನಿಷ್ಠನು; ಜ್ಞಾನಬಲನಿಷ್ಠನು ಅಥವಾ ಮಹಾಸಾತ್ತ್ವಿಕನು; ಶ್ರೇಷ್ಠನು; ಸಕಲಸಜ್ಜನರು ನನ್ನ ಶಾಸನಕ್ಕೆ ಒಳಪಟ್ಟಿದ್ದಾರೆ; ನಿತ್ಯವೂ ಅವರ ಕಷ್ಟಗಳನ್ನು ದೂರಕ್ಕೆ ಓಡಿಸಿದವನು; ಶ್ರೀಹಯಗ್ರೀವದೇವರ ಪಾದದಲ್ಲಿ ಆಸಕ್ತನು; ಇಂತಹ ಗುರುವೆಂದು ಶರಣಾಗತರು ನನ್ನನ್ನು ಭಜಿಸಲಿ.

**ತೀರ್ಥಾನಾಂ ಉತ್ತಮಂ ತೀರ್ಥಂ ವನಾನಾಂ ಉತ್ತಮಂ ವನಮ್ ।**

**ಕ್ಷೇತ್ರಾಣಾಂ ಉತ್ತಮಂ ಕ್ಷೇತ್ರಂ ಮಮ ವೃಂದಾವನಂ ದ್ವಿಜ ॥ 9 ॥**

**ತಸ್ಮಾತ್ ವೃಂದಾವನಮಿದಂ ಸರ್ವಾಭೀಷ್ಟಪ್ರದಂ ಸತಾಮ್ ।**

**ವೃಂದಾವನ ಮಹಿಮೆಯನ್ನು ಹೇಳುತ್ತಾರೆ**; ಎಲೈ! ಬ್ರಾಹ್ಮಣನೇ, ನನ್ನ ವೃಂದಾವನವು ತೀರ್ಥಗಳಲ್ಲಿ ಉತ್ತಮವಾದ ತೀರ್ಥವು; ವನಗಳಲ್ಲಿ ಉತ್ತಮವಾದ ವನವು; ಕ್ಷೇತ್ರಗಳಲ್ಲಿ ಉತ್ತಮವಾದ ಕ್ಷೇತ್ರವು; ಆದ್ದರಿಂದ ಈ ವೃಂದಾವನವು ಸಜ್ಜನರಿಗೆ ಎಲ್ಲಾ ಅಭೀಷ್ಟವನ್ನು ಕೊಡತಕ್ಕದ್ದು.

**ಪಂಚವೃಂದಾವನೇ ಪುಣ್ಯೇ ಸುಪರ್ವಾಣಶ್ಚ ಸರ್ವದಾ (ನಿತ್ಯಶಃ) ॥ 10 ॥**

**ವಸಂತಿ ಪುಣ್ಯಕರ್ಮಾಣೋ ವಿಶೇಷಾತ್ತೇ ಚ ಪರ್ವಸು ।**

**ಪಂಚಮ್ಯಾಂ ಚ ತಿಥೌ ನಿತ್ಯಂ ಪಂಚಪರ್ವಸು ಪೂಜಯೇತ್ ॥ 11॥**

**ವೃಂದಾವನದಲ್ಲಿ ವಿಶೇಷವಾದ ದೇವತಾ ಸನ್ನಿಧಾನವನ್ನು ತಿಳಿಸಿ, ಪೂಜೆಗೆ ವಿಶೇಷ - ಕಾಲವನ್ನು ತಿಳಿಸುತ್ತಾರೆ**. ಪುಣ್ಯಕರವಾದ ಪಂಚವೃಂದಾವನದಲ್ಲಿ ಪುಣ್ಯಕರ್ಮವನ್ನು ಮಾಡತಕ್ಕ ದೇವತೆಗಳು ಸರ್ವದಾ ವಾಸಮಾಡುತ್ತಾರೆ. ವಿಶೇಷವಾಗಿ ಪರ್ವಕಾಲಗಳಲ್ಲಿಯೂ, ಪಂಚಮೀತಿಥಿಯಲ್ಲೂ ಅವರು ಸನ್ನಿಹಿತರಾಗಿರುತ್ತಾರೆ. ಆದ್ದರಿಂದ ಪಂಚಪರ್ವಗಳಲ್ಲಿ ನಿತ್ಯವೂ ಪೂಜಿಸಬೇಕು.

**ಧೂಪೈರ್ದೀಪೈಸ್ತಥಾ ಮಾಲ್ಯೈಃ ಗಂಧೈರ್ದೂರ್ವಾಕ್ಷತಾದಿಭಿಃ ।**

**ಪಂಚಭಕ್ಷ್ಯಸಮಾಯುಕ್ತಂ ಪಂಚಾಮೃತಸಮನ್ವಿತಂ ॥ 12 ॥**

**ಪಂಚಖರ್ಜೂರಸಂಯುಕ್ತಂ ನೈವೇದ್ಯಂ ವಿನಿವೇದಯೇತ್ ।**

**ಏವಂ ಸಂಪೂಜ್ಯಮಾನೋಽಹಂ ದದ್ಯಾಂ ವರಮನುತ್ತಮಂ ॥ 13 ॥**

**ವೃಂದಾವನ ಪೂಜೆಯ ಕ್ರಮವನ್ನು ತಿಳಿಸಿ ಫಲವನ್ನು ಹೇಳುತ್ತಾರೆ;** ಧೂಪ, ದೀಪಗಳಿಂದಲೂ, ಪುಷ್ಪ, ಗಂಧ, ದೂರ್ವಾ, ಅಕ್ಷತಾದಿಗಳಿಂದಲೂ ಪೂಜಿಸಿ ಪಂಚಭಕ್ಷ್ಯಗಳಿಂದ ಕೂಡಿದ, ಪಂಚಾಮೃತ - ಸಮೇತವಾದ, ಪಂಚಖರ್ಜೂರದಿಂದ ಸಹಿತವಾದ ನೈವೇದ್ಯವನ್ನು ಕೊಡಬೇಕು. ಹೀಗೆ ಚೆನ್ನಾಗಿ ಪೂಜಿಸಿದರೆ, ನಾನು ಅತ್ಯುತ್ತಮವಾದ ವರವನ್ನು ಕೊಡುವೆನು.

**ತಸ್ಮಾತ್ ವೃಂದಾವನೇ ಪುಣ್ಯೇ ಪಂಚಪರ್ವಸು ಪೂಜನಂ ।**

**ದರ್ಶನಂ ಸುಜನಾನಾಂತು ಸರ್ವಾಘೌಘವಿನಾಶನಂ ॥ 14 ॥**

**ಉಪಸಂಹರಿಸುತ್ತಾರೆ;** ಮೇಲೆ ಹೇಳಿದ ಕಾರಣದಿಂದ ಪುಣ್ಯಕರವಾದ ವೃಂದಾವನ (ದಲ್ಲಿ) ವನ್ನು ಪಂಚಪರ್ವಗಳಲ್ಲಿ ಪೂಜಿಸತಕ್ಕದ್ದು. ವಿಶೇಷವಾಗಿ ಸಜ್ಜನರು ದರ್ಶನಮಾಡತಕ್ಕದ್ದು, ಅವರ ಸರ್ವಪಾಪಗಳನ್ನೂ ನಾಶಮಾಡತಕ್ಕದ್ದು.

**ವಾದಿರಾಜಾಖ್ಯಯತಿನಾ ಬ್ರಾಹ್ಮಣ ಸ್ವಾಪ್ನಮೂರ್ತಿನಾ ।**

**ಕೃತಂ ವೃಂದಾವನಾಖ್ಯಾನಂ ಪಠತಾಂ ಸಂಪದಾಂ ಪದಮ್ ॥15 ॥**

**ವೃಂದಾವನಾಖ್ಯಾನಕ್ಕೆ ಕರ್ತೃಗಳನ್ನೂ, ಫಲವನ್ನೂ ಸೂಚಿಸುತ್ತಾರೆ;** ಬ್ರಾಹ್ಮಣನ ಸ್ವಪ್ನದಲ್ಲಿ ಮೂರ್ತಿಮಂತರಾಗಿ ಬಂದಂಥ ಶ್ರೀವಾದಿರಾಜರೆಂಬ ಯತಿಗಳಿಂದ ನಿರ್ಮಿತವಾದ ವೃಂದಾವನಾಖ್ಯಾನವು ಪಠಿಸತಕ್ಕವರಿಗೆ ಸಂಪತ್ತುಗಳಿಗೆ ಕಾರಣವಾಗುತ್ತದೆ.

**ಮುಂದಿನ ಮೂರು ಶ್ಲೋಕಗಳನ್ನು ಶ್ರೀವೇದನಿಧಿತೀರ್ಥರು ರಚಿಸಿರುತ್ತಾರೆ.**

**ವೇದನಿಧ್ಯಾಖ್ಯಯತಿನಾ ವಾದಿರಾಜೇಣ ಚೋದಿತಮ್ ।**

**ಸ್ವಾಪ್ನಂ ವೃಂದಾವನಾಖ್ಯಾನಂ ಲಿಖಿತಂ ಪ್ರೀತಯೇ ಗುರೋಃ ॥ 16 ॥**

**ಸ್ವಾಪ್ನವೃಂದಾವನಾಖ್ಯಾನದ ಲೇಖಕರನ್ನು ಸೂಚಿಸುತ್ತಾರೆ**; ಶ್ರೀವೇದನಿಧಿಗಳೆಂಬ ಯತಿಗಳು ಶ್ರೀವಾದಿರಾಜರಿಂದ ಪ್ರೇರಿತವಾದ ಸ್ವಾಪ್ನವೃಂದಾವನಾಖ್ಯಾನವನ್ನು ಗುರುಗಳ ಪ್ರೀತಿಗೋಸ್ಕರ ಬರೆದಿದ್ದಾರೆ.

**ಮಾತಾ ರಾಜಾ ಮತ್ಪಿತಾ ವಾದಿರಾಜೋ**

**ಭ್ರಾತಾ ರಾಜಾ ಮತ್ಸಖಾ ವಾದಿರಾಜಃ ।**

**ಸರ್ವಸ್ವಂ ಮೇ ವಾದಿರಾಜೋ ದಯಾಲುಃ**

**ನಾನ್ಯದ್ದೈವಂ ನೈವ ಜಾನೇ ನ ಜಾನೇ ॥ 17 ॥**

ಶ್ರೀವಾದಿರಾಜರು ನಮಗೆ ತಾಯಿಯಂತೆ ಹಿತಚಿಂತಕರು; ತಂದೆಯಂತೆ ಪೋಷಕರು; ಅಣ್ಣತಮ್ಮಂದಿರಂತೆ ಪ್ರೀತಿಮಾಡತಕ್ಕವರು; ಸ್ನೇಹಿತರಂತೆ ಉಪಕಾರಿಗಳು; ದಯಾಳುಗಳಾದ ಶ್ರೀವಾದಿರಾಜರೇ ನಮಗೆ ಸರ್ವಸ್ವವು. ಅವರನ್ನು ಬಿಟ್ಟು ನಮಗೆ ಬೇರೆಯ ದೈವವು ತಿಳಿದಿಲ್ಲ! ತಿಳಿದಿಲ್ಲ!!

**ಹರಿಭಕ್ತಿದಯಾಂಬೋಧಿತರಲಕ್ರೀಡನೋತ್ಸುಕಾಃ ।**

**ಗುರವೋ ವಾದಿರಾಜಾರ್ಯಾಃ ಕರುಣಾಂ ವಿತರಂತು ಮೇ ॥ 18॥**

॥ ಇತಿ ಶ್ರೀಮದಣುವೃಂದಾವನಾಖ್ಯಾನಂ ಸಂಪೂರ್ಣಮ್ ॥

ಭಗವಂತನಲ್ಲಿ-ಭಕ್ತಿ ಸಜ್ಜನರಲ್ಲಿ-ದಯೆಎಂಬ ಸಮುದ್ರದ ಅಥವಾ ಭಗವದ್ಭಕ್ತರಲ್ಲಿ ದಯೆಎಂಬ ಸಮುದ್ರದ ತೆರೆಗಳಲ್ಲಿ ಕ್ರೀಡಿಸುವುದರಲ್ಲಿ ಆಸಕ್ತರಾದ ಶ್ರೀವಾದಿರಾಜಾರ್ಯರೆಂಬ ಗುರುಗಳು ನನಗೆ ಕರುಣೆಯನ್ನು ಮಾಡಲಿ.

॥ ಶ್ರೀಕೃಷ್ಣಾರ್ಪಣಮಸ್ತು ॥

**॥ ಇತಿ ಶ್ರೀದೇವೇಂದ್ರತೀರ್ಥಪಾದಪದ್ಮಾರಾಧಕೇನ ರಘುನಂದನೇನ ವಿರಚಿತಂ ಶ್ರೀಮದಣುವೃಂದಾವನಾಖ್ಯಾನ ವ್ಯಾಖ್ಯಾನಂ ಸಂಪೂರ್ಣಮ್ ॥**

---

Please send corrections in typing, if any, to- https://forms.gle/6P9WnjtZ7YFseSD79.

**..śrīkṛṣṇārpaṇamastu..**